A.—Sri A. G. RAMACHANDRA RAO (Minister for Law and Education) [on behalf of SRI H. SIDDAVEERAPPA (Minister for Home)].—

(*a*) Passengers: 4,737 during January 1956.

Total fare earned: Rs. 10,814-10-0.

(*b*) No.

(*c*) This will be examined.

ಶ್ರೀ ಟಿ. ಜಿ. ತಿಮ್ಮೇಗೌಡ.—(b) ಭಾಗಕ್ಕೆ ಉತ್ತರವಾಗಿ 'ಇಲ್ಲ' ಎಂದು ಹೇಳಿದೆ. ಇದನ್ನು examine ಮಾಡಲಾಗಿದೆಯೇ?

*ಶ್ರೀ ಎ. ಜಿ. ರಾಮಚಂದ್ರರಾವ್.—Examine ಮಾಡಿದೆ. ಆದರೆ 'ಗಿರಿ ಎಕ್ಸ್‌ಪ್ರೆಸ್' ನಡೆಯುತ್ತಾ ಇರುವುದರಿಂದ ಇನ್ನೂ ಒಂದು additional service ಹಾಕುವುದಕ್ಕೆ ಅವಕಾಶವಿಲ್ಲವೆಂದು ಹೇಳಲಾಗಿದೆ.

ಶ್ರೀ ಟಿ. ಜಿ. ತಿಮ್ಮೇಗೌಡ.—'Giri Express' ಬಸ್ಸಿನ capacity ಎಷ್ಟು?

ಶ್ರೀ ಎ. ಜಿ. ರಾಮಚಂದ್ರರಾವ್.—ನಲವತ್ತು. The capacity of the bus is 40 seats.

ಶ್ರೀ ಟಿ. ಜಿ. ತಿಮ್ಮೇಗೌಡ.—ಒಂದು ತಿಂಗಳಿನಲ್ಲಿ 4,737 ಜನ ಪ್ರಯಾಣ ಮಾಡುತ್ತಾರೆಂದು ತಿಳಿಸಿಲ್ಪಟ್ಟಿದೆ. ದಿನ ಒಂದಕ್ಕೆ ಎಷ್ಟು ಜನ ಪ್ರಯಾಣ ಮಾಡುತ್ತಾರೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಸ್ಸಿನ capacity 40 ಎಂದರೆ ಹೋಗಿಬರುತ್ತ 80 ಜನರು ಪ್ರಯಾಣ ಮಾಡುತ್ತಾರೆ ಎಂದು ತಿಳಿಯಬಹುದು.

ಶ್ರೀ ಟಿ. ಜಿ. ತಿಮ್ಮೇಗೌಡ.—ಉತ್ತರದಲ್ಲಿ ಕೊಟ್ಟಿರುವ ಪ್ರಕಾರ 150 ಜನರಾಗುತ್ತಾರೆ. ತಾವು ಪರಿಶೀಲನೆ ಮಾಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದರಲ್ಲಿ short distance passengers ಇರುತ್ತಾರೆ. ಅದೆಲ್ಲ ಸೇರಿದೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಬಸ್ಸಿನಲ್ಲಿ 40 ಸೀಟುಗಳು ಮಾತ್ರವಿದ್ದು, ತಮ್ಮ ಉತ್ತರದ ಪ್ರಕಾರ 75 ಜನ ಪ್ರಯಾಣ ಮಾಡಿದರೆ overload ಆಗುವುದಿಲ್ಲವೆ?

Sri A. G. RAMACHANDRA RAO.—I believe, Sir, that the short-distance passengers are also taken into account and the total number is given.

ಶ್ರೀ ಟಿ. ಜಿ. ತಿಮ್ಮೇಗೌಡ.—ಈ ದೃಷ್ಟಿಯಿಂದ ಪ್ರಯಾಣಿಕರ ಸಂಖ್ಯೆ ಜಾಸ್ತಿ ಇದೆ ಎಂದು ಒಪ್ಪಿಕೊಳ್ಳುತ್ತಿರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಪ್ರಯಾಣಿಕರ ಸಂಖ್ಯೆ ಜಾಸ್ತಿ ಇದೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಇನ್ನೊಂದು ಬಸ್ಸು ನಡೆಸುವುದಕ್ಕೆ ಅವಕಾಶ ಕೊಡುತ್ತೀರಾ?

Sri A. G. RAMACHANDRA RAO.—We will consider.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—"ಗಿರಿ ಎಕ್ಸ್‌ಪ್ರೆಸ್" ಬಸ್ಸಿಗೆ ಒಂದು ತಿಂಗಳಿನಲ್ಲಿ 10,814 ರೂಪಾಯಿ 10 ಆಣಿಗಳು ವರಮಾನ ಎಂದು ಕೊಡಲಾಗಿದೆ. ಇದು ಖರ್ಚು ಕಳೆದು ಬಂದಿರುವುದೇ ಅಥವಾ ಖರ್ಚು ಸೇರಿಕೊಂಡಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಹಣ ಟಿಕೆಟ್ಟುಗಳಿಂದ ಬಂದುದಾಗಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ಬಸ್ ಸರ್ವಿಸ್ ಇದ್ದಮೇಲೆ ಬಹಳ ದೂರ ಹೋಗತಕ್ಕ ಪ್ರಯಾಣಿಕರಿಗೆ ಸೀಟುಗಳು ಸಿಕ್ಕುವುದಿಲ್ಲ ಮತ್ತು ಬಹಳ overload ಹಾಕುತ್ತಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ಬಸ್ ಸರ್ವಿಸ್ಸಿಗೆ ಒಂದು ದಿವಸಕ್ಕೆ ಸುಮಾರು 400 ರೂಪಾಯಿಗಳ ವರಮಾನ ಇದ್ದರೆ ಪ್ರಯಾಣಿಕರು ಆ ಮಾರ್ಗದಲ್ಲಿ ಹೆಚ್ಚಾಗಿದ್ದಾರೆಂದು ತಿಳಿಯುತ್ತದೆ. ಈ ಮಾರ್ಗದಲ್ಲಿ ಇನ್ನೂ ಒಂದು ಬಸ್ ಹಾಕುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಹಿಂದೆ ಒಂದು ಸಲ ಮಾನ್ಯ ಮಂತ್ರಿಗಳು ಎಲ್ಲಾ ಜಿಲ್ಲಾ ಮುಖ್ಯ ಪಟ್ಟಣಗಳಿಗೂ ಸರ್ಕಾರಿ ಬಸ್ ಸರ್ವಿಸ್ ಹಾಕುತ್ತೇವೆಂದು ಹೇಳುತ್ತಿದ್ದರು. ಶಿವಮೊಗ್ಗಾಕ್ಕೆ ಕೂಡಲೇ ಒಂದು ಬಸ್ ಸರ್ವಿಸ್ ಹಾಕುತ್ತೀರಾ?

Sri A. G. RAMACHANDRA RAO.—We had a very ambitious plan for the Second Five-Year Period. But it has been cut. Even so, we will try whether we can reach Shimoga.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ರೈಲಿನಲ್ಲಿ ಪ್ರಯಾಣ ಮಾಡಬೇಕಾದರೆ ಕಾಲಕ್ಕೆ ಸರಿಯಾಗಿ ಬರುವುದಕ್ಕೆ ಆಗುವುದಿಲ್ಲವಾದುದರಿಂದ ಎಲ್ಲ District Headquarterಗಳಿಗೂ ಬೆಂಗಳೂರಿನಿಂದ Express Service ಬಸ್ಸುಗಳನ್ನು ಸಾಧ್ಯವಾದಷ್ಟು ಜಾಗ್ರತೆಯಾಗಿ ಹಾಕುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಸ್ಸುಗಳ ಅವಶ್ಯಕತೆ ಗೊತ್ತಾಗಿದೆ. ನಾವು ಎಲ್ಲ District Headquarterಗಳಿಗೂ ಬಸ್ಸು ಸೌಕರ್ಯವನ್ನು ಕಲ್ಪಿಸಬೇಕೆಂದು ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದೆವು. ಅದನ್ನು cut ಮಾಡಿದ್ದಾರೆ. ಶಿವಮೊಗ್ಗಕ್ಕೆ ಒಂದು ಬಸ್ ಹಾಕುವ ವಿಷಯವನ್ನು ಪರಿಶೀಲನೆ ಮಾಡುತ್ತೇವೆ.

Passenger Transport (Nationalisation).

Q.—120. Sri D. R. KARI GOWDA (Hassan).—

Will the Government be pleased to state:—

(*a*) what is the policy of Government adopted in nationalising passenger transport in the State;

(*b*) whether there is any definite programme of nationalisation of all the routes within three years?

A.—Sri A. G. RAMACHANDRA RAO (Minister for Law and Education) [On behalf of SRI H. SIDDAVEERAPPA (Minister for Home)].—

(*a*) The policy of the Government is to extend the nationalisation of passenger transport in the State gradually according to a phased programme with a view to providing adequate and efficient means of transport to the travelling public.

(*b*) No; nationalisation of all routes in three years is not feasible.

ಶ್ರೀ ಡಿ. ಆರ್. ಕರಿಗೌಡ.—(a) ಪ್ರಶ್ನೆಗೆ ಉತ್ತರವಾಗಿ ತಯಾರಾದ ಕಾರ್ಯಕ್ರಮದಂತೆ ವ್ಯವಸ್ಥೆ ಮಾಡುತ್ತೇವೆಂದು ಹೇಳಿದೆ. ಏನು ಕಾರ್ಯಕ್ರಮ ಹಾಕಿದೆ?

*ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಆರು ಲೈನುಗಳನ್ನು ರಾಷ್ಟ್ರೀಕರಣ ಮಾಡಲಾಗಿದೆ. ಇನ್ನೂ ಐದು ಲೈನುಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಅದಕ್ಕೆ 40 ಲಕ್ಷ ರೂಪಾಯಿಗಳನ್ನು ಇಕ್ವಿಪ್ಸ್ ಮಾಡಬಹುದೆಂಬ ಸೂಚನೆಯಿದೆ. ಪ್ರೊಗ್ರಾಂ ಹಾಕುವುದು ಈಗ ಪರ್ಯಾಲೋಚನೆಯಲ್ಲಿದೆ.

ಶ್ರೀ ಡಿ. ಆರ್. ಕರಿಗೌಡ.—ಅದನ್ನು ಮಾಡುವವರು ಯಾರು?

Sri A. G. RAMACHANDRA RAO.—I will lay it on the table.

ಶ್ರೀ ಡಿ. ಆರ್. ಕರಿಗೌಡ.—ಮುಂದಿನ ಏಪ್ರಿಲ್ ಒಂದರಿಂದ ತುಮಕೂರು—ಚಿತ್ರದುರ್ಗ ಲೈನ್ ಮನಾಪಲ ಮಾಡುತ್ತೇವೆಂದು ಹೇಳಿದೆ. ಅದನ್ನು ಮುಂಚೆ ತಿಳಿಸಬೇಡವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಮಾನ್ಯವಾಗಿ ಇಂಥ ಸಂದರ್ಭಗಳಲ್ಲಿ ಆಲ್ಟರ್ನೇಟಿವ್ ಲೈನು ಸಜೆಸ್ಟ್ ಮಾಡಿದರೆ ಕೊಡುತ್ತೇವೆ.

ಶ್ರೀ ಡಿ. ಆರ್. ಕರಿಗೌಡ.—ಈಗಾಗಲೆ ಹೆಚ್ಚು ಲೈನುಗಳನ್ನು ಕೊಟ್ಟು ಈಗ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಡಿ. ಆರ್. ಕರಿಗೌಡ.—ಹೋದ ವರ್ಷ ಮತ್ತು ಈ ವರ್ಷ ರಾಷ್ಟ್ರೀಕರಣದ ದೆಸೆಯಿಂದ ತೊಂದರೆಯಾಗಿರುವವರಿಗೆ ಪರಿಹಾರ ಕೊಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಖಚಿತವಾಗಿ ಸಂದರ್ಭ ಯಾವುದೆಂದು ಹೇಳಿದರೆ ಪರಿಶೀಲನ ಬಹುದು.

ಶ್ರೀ ಡಿ. ಆರ್. ಕರಿಗೌಡ.—ಸರ್ಕಾರದವರು ರಾಷ್ಟ್ರೀಕರಣ ಮಾಡುವಾಗ ಅದನ್ನು ಆರುತಿಂಗಳು ಅಥವಾ ವರ್ಷ ಮುಂಚೆಯೇ ತಿಳಿಸುವುದು ಒಳ್ಳೆಯದಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಯೋಚನೆ ಮಾಡುತ್ತೇವೆ.

Sri Mulka GOVINDA REDDY.—When was this nationalisation scheme introduced in Mysore?

Sri A. G. RAMACHANDRA RAO.—It commenced in 1948.

Sri Mulka GOVINDA REDDY.—In 1948 if this was introduced in Mysore, was there no scheme to nationalise the entire lines?

Sri A. G. RAMACHANDRA RAO.—There was a rough scheme.

Sri Mulka GOVINDA REDDY.—What was the period fixed for the entire nationalisation of this bus transport?

Sri A. G. RAMACHANDRA RAO.—I want notice for that.

Sri Mulka GOVINDA REDDY.—How many miles of routes are now covered by the Mysore Government and how many miles by private transport?

Sri A. G. RAMACHANDRA RAO.—Notice.

Sri Mulka GOVINDA REDDY.—How long does Government take to completely nationalise the transport services in Mysore State?

Sri A. G. RAMACHANDRA RAO.—Sir, it is estimated that nearly seven crores would be necessary to nationalise the entire system. So, the period is rather difficult to fix.

Sri Mulka GOVINDA REDDY.—Should the Government not fix up a period by which the entire transport in Mysore State is to be nationalised?

Sri A. G. RAMACHANDRA RAO.—As I said, the total investment would be about 7 crores and in the Second Five-Year Plan we sought to cover by investing 248 lakhs. Now it has been cut and therefore, it is very difficult to fix the period.

Inter-State Bus Services (taxes to be paid).

Q.—274. Sri Mali MARIYAPPA (Pavagada).—

Will the Government be pleased to state:—

(*a*) whether they are aware of the great hardship to which bus-owners of Mysore are subjected while running their services partly in Mysore and partly in Andhra, Madras and Bombay inasmuch as they have to pay taxes at two points and submit their renewals and registration at two places;